ಡಾ|| ಎಸ್. ಸೆಲ್ವಕುಮಾರ್, ಭಾಆಸೇ.,
ವ್ಯವಸ್ಥಾಪಕ ನಿರ್ದೇಶಕರು
**Dr. S. SELVAKUMAR, IAS.,**
Managing Director

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
**Karnataka Power Transmission Corporation Limited**
Kaveri Bhavan, Bengaluru - 560 009.
CIN : U40109KA1999SGCO25521
Office : 080-22244556 / 22214342
Fax : 91-80-22213526
e-mail : md@kptcl.com

10ನೇ ಅಕ್ಟೋಬರ್ 2018

ಪತ್ರ ಸಂಖ್ಯೆ: ಕವಿಪ್ರನಿನಿ/ವ್ಯನಿ/ಹಿಕಾ/ಔಬಾ/ಬಿ23/87010/2018-19/72

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ಬೆಂಗಳೂರು-1.

ಮಾನ್ಯರೇ,

ವಿಷಯ: ಕವಿಪ್ರನಿನಿ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರನ್ನು ಖಾಯಂಗೊಳಿಸುವ ಬಗ್ಗೆ.

ಉಲ್ಲೇಖ:
1. ಈ ಕಚೇರಿಯ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ23/17461/2010-11, ದಿನಾಂಕ: 29.01.2015.
2. ತಮ್ಮ ಕಚೇರಿಯ ಪತ್ರ ಸಂಖ್ಯೆ: ಇಎನ್ 116 ಇಇಬಿ 2010 ದಿನಾಂಕ: 05.03.2015.
3. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು ರವರ ಪ್ರಕರಣ ಸಂಖ್ಯೆ: 86/2010ರ ಸಂಬಂಧ ದಿನಾಂಕ: 18.08.2016ರ ನಿರ್ದೇಶನ.
4. ಕರ್ನಾಟಕ ವಿದ್ಯುತ ಪ್ರಸರಣ ನಿಗಮ ನೌಕರರ ಸಂಘ (ರಿ.ಸಂ.659), ಬೆಂಗಳೂರು ರವರ ಪತ್ರ ಸಂಖ್ಯೆ: 1043/17-18 ದಿನಾಂಕ: 02.01.2018.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದಲ್ಲಿ ಖಾಯಂ ಶುಚಿಗಾರರ ನೇರ ನೇಮಕಾತಿ ಇಲ್ಲದಿರುವ ಕಾರಣದಿಂದ ಕಛೇರಿ ಆವರಣ, ಹೊಸದಾಗಿ ರಚಿಸಲಾದ ವಿದ್ಯುತ್ ವಿತರಣಾ ಕೇಂದ್ರ ಹಾಗೂ ಇತ್ಯಾದಿ ಕಚೇರಿಗಳ ಶುಚಿತ್ವದ ದೃಷ್ಟಿಯಿಂದ 1998ರ ಹಿಂದಿನಿಂದಲೂ ಅರೆಕಾಲಿಕ ಶುಚಿಗಾರರನ್ನು ಯಾವುದೇ ಅಧಿಸೂಚನೆ, ನೇಮಕಾತಿ ಪ್ರಕಟಣೆ ಇಲ್ಲದೇ ಆಯಾ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳು ಅನುಮೋದನೆ ಮೇರೆಗೆ ನೇರವಾಗಿ ಗುತ್ತಿಗೆ ಆಧಾರದ ಮೇಲೆ ಮಾಸಿಕ ಸಂಭಾವನೆ ಆಧಾರದಲ್ಲಿ ಗೊತ್ತುಪಡಿಸಿಕೊಳ್ಳಲಾಗಿರುತ್ತದೆ. ದಿನಾಂಕ: 31.03.2007ರ ನಂತರ ಯಾವುದೇ ಅರೆಕಾಲಿಕ ಶುಚಿಗಾರರನ್ನು ಪಡೆಯಲು ನಿಷೇಧಿಸಲಾಗಿರುತ್ತದೆ. ಪ್ರಸ್ತುತ ಕವಿಪ್ರನಿನಿ/ಎಸ್ಕಾಂಗಳಲ್ಲಿ ಸುಮಾರು 757 ಅರೆಕಾಲಿಕ

ಶುಚಿಗಾರರು ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಅವರುಗಳಿಗೆ ದಿನಾಂಕ: 01.04.2018 ರಿಂದ ಜಾರಿಗೆ ಬರುವಂತೆ ರೂ.10,000/- ಮಾಸಿಕ ಸಂಭಾವನೆಯನ್ನು ಪಾವತಿಸಲು ಆದೇಶಿಸಿರುತ್ತದೆ.

ಅರೆಕಾಲಿಕ ಶುಚಿಗಾರರು, ಕವಿಪ್ರನಿ ನೌಕರರ ಸಂಘ(ರಿ.ಸಂ.659) ಮತ್ತು ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಂಸ್ಥೆ, ಬೆಂಗಳೂರು ರವರುಗಳು ಅರೆಕಾಲಿಕ ಶುಚಿಗಾರರನ್ನು ನಿಗಮದಲ್ಲಿ ಖಾಯಂಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದಲ್ಲಿ ದೂರು ಸಲ್ಲಿಸಿರುತ್ತಾರೆ. ಅದರಂತೆ ಆಯೋಗವು ಪ್ರಕರಣ ಸಂಖ್ಯೆ: 86/2010 ನ್ನು ದಾಖಲಿಸಿದ್ದು, ವಿಚಾರಣೆ ವೇಳೆಯಲ್ಲಿ ಆಯೋಗವು ಅರೆಕಾಲಿಕ ಶುಚಿಗಾರರನ್ನು ನಿಗಮದಲ್ಲಿ ಖಾಯಂಗೊಳಿಸುವಂತೆ ಹಾಗೂ ಪೂರ್ಣಾವಧಿಯ ಸೇವೆ ಎಂದು ಪರಿಗಣಿಸಲು ಸಹಾ ವಿಚಾರಣೆಯಲ್ಲಿ ಒತ್ತಾಯಿಸಿದ ಹಿನ್ನಲೆಯಲ್ಲಿ, ದಿನಾಂಕ: 29.01.2015 ರಂದು ತಮ್ಮ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿ ವಿಷಯದಲ್ಲಿ ಸರ್ಕಾರವು ದಿನಾಂಕ: 05.03.2015ರ ಪತ್ರದಲ್ಲಿ ಅರೆಕಾಲಿಕ ಶುಚಿಗಾರರನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿಳಿಸಿರುತ್ತದೆ.(ಪ್ರತಿ ಲಗತ್ತಿಸಿದೆ)

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಅರೆಕಾಲಿಕ ಶುಚಿಗಾರರನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿಳಿಸಿದ್ದರೂ ಸಹ, ಪ್ರಕರಣ ಸಂಖ್ಯೆ: 86/2010 ಕ್ಕೆ ಸಂಬಂಧಿಸಿದಂತೆ ದಿನಾಂಕ: 18.08.2016 ರಂದು ಪ್ರಕರಣವನ್ನು ಅಂತಿಮಗೊಳಿಸಿ ಈ ಕೆಳಕಂಡ ನಿರ್ದೇಶನವನ್ನು ನೀಡಿರುತ್ತದೆ. (ಪ್ರತಿ ಲಗತ್ತಿಸಿದೆ)

> The respondents are hereby suggested and recommended to regularize the services of 840 part time sanitary workers against to the permanent posts with effect from 01.08.1999. The services of these above said employees could be absorbed in the time scale of Mali Gr-2, Field men Gr-3, Care taker, Dhobi, Ward Attendant, Sanitary worker, Watch man (office/security/stores), Office attendant Gr-2. If vacancies are not available in these above said posts, the deponent should create the supernumerary posts with directing to the deponents to grant all consequential benefits from the date of their absorption against to the permanent posts.
>
> In case of death or in case of removed from the service after attaining the age of 58/60 years according to the length of service rendered in the department some lumpsum compensate amount shall be given to the legal heir of the deceased employee or to the employee himself as the case may be. This suggestions and recommendation unanimously concluded by the chairman and members of the commission.

ಮುಂದುವರೆದು, ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ರಿ.ಸಂ.659), ಬೆಂಗಳೂರು ರವರು ಕೂಡ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ನಿರ್ದೇಶವನ್ನು ಉಲ್ಲೇಖಿಸಿ ಅರೆಕಾಲಿಕ ಶುಚಿಗಾರರನ್ನು ಖಾಯಂಗೊಳಿಸುವಂತೆ ಕೋರಿರುತ್ತಾರೆ. ಅಲ್ಲದೇ ಅರೆಕಾಲಿಕ ಶುಚಿಗಾರರು 25 ವರ್ಷಗಳಿಂದಲೂ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದು, ಗರಿಷ್ಠ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರೆ ಕಾರ್ಯನಿರ್ವಹಿಸುತ್ತಿರುವುದರಿಂದ, ಒಂದು ವಿಶೇಷ ಯೋಜನೆಯನ್ನು ರೂಪಿಸಿ ಸದರಿ ಅರೆಕಾಲಿಕ ಶುಚಿಗಾರರನ್ನು ಖಾಯಂಗೊಳಿಸಬೇಕೆಂದು ಉಲ್ಲೇಖಿತ ಪತ್ರ–4ರಲ್ಲಿ ಮನವಿ ಮಾಡಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗಾಗಿ ಮಂಡಿಸುತ್ತಾ, ಅರೆಕಾಲಿಕ ಶುಚಿಗಾರರು ಸುಮಾರು 20–25 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದರಿಂದ, ಸದರಿಯವರನ್ನು ಖಾಯಂಗೊಳಿಸುವ ಬಗ್ಗೆ ನಿರ್ದೇಶನವನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು,
ಕವಿಪ್ರನಿನಿ, ಬೆಂಗಳೂರು.